ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ತೆಂಗು ಅಭಿವೃದ್ಧಿ ಮಂಡಳಿಯವರ "ಸಮಗ್ರ ತೆಂಗು ಬೇಸಾಯ" ಯೋಜನೆಯಡಿ :

ಅ) ಅಣಬೆ ರೋಗಗ್ರಸ್ತ ಮರಗಳ ನಿರ್ಮೂಲನೆಗಾಗಿ ಪ್ರತಿ ಮರಕ್ಕೆ ರೂ.200-00 ಉತ್ತೇಜನ ಧನ (ಒಂದು ಹೆಕ್ಟೇರ್ ಪ್ರದೇಶಕ್ಕೆ ಎಂಟು ಮರಗಳು ಮಾತ್ರ)

ಆ) ಈ ಪ್ರದೇಶದಲ್ಲಿ ಹೊಸದಾಗಿ ತೆಂಗಿನ ಸಸಿಗಳನ್ನು ನೆಡಲು ತಲಾ ರೂ.5-00 ರಂತೆ.

ಇ) ಸಸ್ಯ ಸಂರಕ್ಷಣೆ ಇತ್ಯಾದಿಗಾಗಿ ಪ್ರತಿ ಗಿಡಕ್ಕೆ ತಲಾ ರೂ.8-00

ಈ) ಈ ರೋಗಗ್ರಸ್ತ ತೋಟಗಳಲ್ಲಿ ಮಧ್ಯಂತರ ಬೆಳೆ ಪ್ರೋತ್ಸಹಿಸಲು ಪ್ರತಿ ಹೆಕ್ಟೇರ್‌ಗೆ ರೂ.200-00ರಂತೆ ಗಿಡಗಳ ಬಾಬ್ತು ಒದಗಿಸುವುದು. (ಹೊಸದುರ್ಗದಲ್ಲಿ 200 ಹೆಕ್ಟೇರ್)

ತಿರುಪತಿಯಲ್ಲಿರುವ ಮುಜರಾಯಿ ಇಲಾಖೆ ಸ್ವತ್ತು

936 - ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿರುಪತಿಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಸ್ವತ್ತನ್ನು ಇತರರು ಅಕ್ರಮಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಮುಜರಾಯಿ ಇಲಾಖೆಗೆ ಸೇರಿದ ಸ್ವತ್ತಿನ ವಿವರವೇನು?

ಇ) ಸರ್ಕಾರ ಈ ಸ್ವತ್ತನ್ನು ಸಾರ್ವಜನಿಕ ಉಪಯೋಗಕ್ಕಾಗಿ ಯಾವ ರೀತಿ ಬಳಸಲು ಆಲೋಚಿಸಿದೆ?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ತಿರುಪತಿಯಲ್ಲಿ ಕರ್ನಾಟಕ ರಾಜ್ಯ ಛತ್ರದ ಸ್ವತ್ತನ್ನು ಯಾರು ಅತಿಕ್ರಮಿಸಿರುವುದಿಲ್ಲ.

ಆ) ತಿರುಪತಿಯಲ್ಲಿ ಕರ್ನಾಟಕ ರಾಜ್ಯದ ಸ್ವತ್ತಿನ ವಿವರ ಈ ರೀತಿ ಇದೆ. ಶಿಥಿಲಾವಸ್ಥೆಯಲ್ಲಿರುವ ಒಂದು ಹಳೆ ಛತ್ರ ಮತ್ತು ಅದಕ್ಕೆ ಹೊಂದಿಕೊಂಡಂತೆ 9 ಅಂಗಡಿಗಳು ಇರುತ್ತದೆ.

ಇ) ಹಳೇ ಛತ್ರವನ್ನು ಕೆಡವಿ ಹೊಸದಾಗಿ ವಾಣಿಜ್ಯ ಸಂಕೀರ್ಣವನ್ನು ಕಟ್ಟುವ ಬಗ್ಗೆ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

ಪಟೇಲ್ ಹಾಗೂ ಶ್ಯಾನುಭೋಗರ ನಿವೃತ್ತಿ ವೇತನ

944 - ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪಟೇಲ್ ಹಾಗೂ ಶ್ಯಾನುಭೋಗರಾಗಿ ಸೇವೆ ಸಲ್ಲಿಸಿದವರಿಗೆ ಸರ್ಕಾರಿ ನಿವೃತ್ತಿ ವೇತನ ನೀಡುತ್ತಿರುವುದು ನಿಜವಲ್ಲವೆ; ಹಾಗಿದ್ದಲ್ಲಿ, ಯಾವ ವರ್ಷದಿಂದ ಎಷ್ಟು ನಿವೃತ್ತಿ ವೇತನ ನೀಡಲಾಗುತ್ತಿದೆ?*

ಆ) *ಧಾರವಾಡ, ಬೆಳಗಾಂ, ಬಿಜಾಪುರ ಈ ಜಿಲ್ಲೆಗಳಲ್ಲಿನ ಮಾಜಿ ಪಟೇಲರಿಗೆ ನಿವೃತ್ತಿ ವೇತನ ಕಡಿಮೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಶ್ಯಾನುಭೋಗರಿಗೆ ನೀಡುತ್ತಿರುವಷ್ಟೇ ನಿವೃತ್ತಿ ವೇತನ ಪಟೇಲರಿಗೆ ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಮಾಜಿ ಶ್ಯಾನುಭೋಗರುಗಳಿಗೆ ಹಾಗೂ ಅನುವಂಶಿಕ ಪಟೇಲರುಗಳಿಗೂ ನಿವೃತ್ತಿ ವೇತನ ನೀಡುತ್ತಿಲ್ಲ. ಆದರೆ ಅನುವಂಶಿಕ ಅನುಕಂಪ ಭತ್ಯೆ/ಅಡ್‌ಹಾಕ್ ಭತ್ಯೆ ನೀಡಲಾಗುತ್ತಿದೆ.

ಆ) ನಿವೃತ್ತಿ ವೇತನ ನೀಡುತ್ತಿಲ್ಲವಾದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ನಿವೃತ್ತಿ ವೇತನ ನೀಡಲಾಗುತ್ತಿಲ್ಲ. ಆದರೆ ಅರ್ಹ ಮಾಜಿ ಶ್ಯಾನುಭೋಗರುಗಳು/ಮಾಜಿ ಅನುವಂಶಿಕ ಪಟೇಲರುಗಳಿಗೆ ಅಡ್‌ಹಾಕ್ ಭತ್ಯೆ ರೂ.500.00ರಂತೆ ನೀಡಲಾಗುತ್ತಿದೆ.

ರಾಜ್ಯದಲ್ಲಿರುವ ಸಹಕಾರ ಸಂಘಗಳು

951 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ನಿಷ್ಕ್ರೀಯ ಸಹಕಾರ ಸಂಘಗಳ ಪುನಃಶ್ಚೇತನಗೊಳಿಸುವ ಬಗೆಗೆ ಕೈಗೊಂಡಿರುವ ಕ್ರಮ?*

ಆ) *ರಾಜ್ಯದಲ್ಲಿರುವ ಅಂತಹ ಸಹಕಾರ ಸಂಘಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)*

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿರುವ ನಿಷ್ಕ್ರೀಯ ಸಹಕಾರ ಸಂಘಗಳನ್ನು ಪುನಃಶ್ಚೇತನಗೊಳಿಸಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ.

1. ನಿಷ್ಕ್ರೀಯತೆಗೆ ಕಾರಣಗಳ ಗುರುತಿಸುವಿಕೆ.
2. ಆ ಕಾರಣಗಳ ವಿಶ್ಲೇಷಣೆ.
3. ನಿಷ್ಕ್ರೀಯ ಸಹಕಾರ ಸಂಘಗಳಿಗೆ ಪುನಃಶ್ಚೇತನ ಸಮಾಪನೆಯನ್ನು ಮಾಡಲೂ ಆ ಸಂಘಗಳ ವರ್ಗೀಕರಣ.